ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೮

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೊಂಭತ್ತನೆಯ ಅಧಿವೇಶನ**

**ಗುರುವಾರ, ದಿನಾಂಕ: ೨೭ನೇ ಆಗಸ್ಟ್, ೨೦೨೬**

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು

೩. ನಗರಾಭಿವೃದ್ಧಿ ಸಚಿವರು

೪. ಗೃಹ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಇ–ಆಡಳಿತ ಸಚಿವರು

೫. ಅಬಕಾರಿ ಸಚಿವರು

೬. ಯೋಜನೆ ಮತ್ತು ಸಾಂಖ್ಯಿಕ ಸಚಿವರು

---

## ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ UGD ಕಾಮಗಾರಿ ಕುರಿತು

**ಶ್ರೀ ಪಿ.ವಿ. ಮೋಹನ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೬ (೧೧೩೬) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ UGD ವ್ಯವಸ್ಥೆಗಾಗಿ ವಿವಿಧ ಯೋಜನೆಗಳಡಿ ಒಟ್ಟು ಎಷ್ಟು ಹಣ ವೆಚ್ಚ ಮಾಡಲಾಗಿದೆ ;

(ಆ) ADB, AMRUT ರಾಜ್ಯ ಸರ್ಕಾರ, KUIDC ಮತ್ತು MCC ಯೋಜನೆವಾರು ಮಂಜೂರಾದ ಮೊತ್ತ, ವೆಚ್ಚವಾದ ಮೊತ್ತ ಹಾಗೂ ನಿರ್ಮಿಸಲಾದ ಮೂಲಸೌಕರ್ಯದ ವಿವರಗಳನ್ನು ಒದಗಿಸುವುದು ;

(ಇ) ಪ್ರಸ್ತುತ ೧೮೫೫ ಕಿ.ಮೀ UGD ಜಾಲವನ್ನು upgrading ಮಾಡಬೇಕಾದ ಪರಿಸ್ಥಿತಿ ಏಕೆ ಉಂಟಾಗಿದೆ ; ಇದಕ್ಕೆ ತಾಂತ್ರಿಕ ಲೋಪವೇ, ನಿರ್ವಹಣೆಯ ಕೊರತೆಯೇ ಅಥವಾ ಕಳಪೆ ಕಾಮಗಾರಿಯೇ ; ಕಾರಣ ಸಮೇತ ಮಾಹಿತಿ ಒದಗಿಸುವುದು ;

(ಈ) ADB ಯೋಜನೆಯಡಿ ನಿರ್ಮಿಸಲಾದ UGD ಜಾಲದ ಪ್ರಸ್ತುತ ಸ್ಥಿತಿ ಏನು ; ಅದರಲ್ಲಿ ಎಷ್ಟು ಕಿ.ಮೀ. ಜಾಲ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ ;

(ಉ) ನಗರದಾದ್ಯಂತ UGD leakage detection ಹಾಗೂ hydraulic testing ನಡೆಸಲಾಗಿದೆಯೇ ; ನಡೆಸಿದ್ದರೆ, ಅದರ ವರದಿಯನ್ನು ಪ್ರಕಟಿಸಲಾಗುವುದೇ ;

(ಊ) UGD ಸೋರಿಕೆಯಿಂದ ಬಾವಿ, borewell ಕೆರೆ ಅಥವಾ ಇತರ ಜಲಮೂಲಗಳು ಕಲುಷಿತವಾಗಿರುವ ಕುರಿತು ಸರ್ಕಾರ ಯಾವುದೇ ಸಮಗ್ರ water quality survey ನಡೆಸಿದೆಯೇ ;

(ಋ) ಧಾರ್ಮಿಕ ಕೇಂದ್ರಗಳಾದ ದೇವಸ್ಥಾನ, ಮಸೀದಿ ಮತ್ತು ಚರ್ಚ್‌ಗಳ ಆವರಣದಲ್ಲಿರುವ ಬಾವಿಗಳ ನೀರಿನ ಗುಣಮಟ್ಟವನ್ನು ವಿಶೇಷವಾಗಿ ಪರೀಕ್ಷಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ?

## ರಾಜ್ಯ ಸರ್ಕಾರದ ವಿವಿಧ ನೇಮಕಾತಿ ಪ್ರಾಧಿಕಾರಗಳು ಹಾಗೂ ನಿಗಮಗಳ ಹುದ್ದೆಗಳ ನೇಮಕಾತಿ ಅರ್ಜಿ ಸಲ್ಲಿಕೆಗೆ ಹೆಚ್ಚಿನ ಅರ್ಜಿ ಶುಲ್ಕವನ್ನು ನಿಗದಿಪಡಿಸಿರುವುದನ್ನು ಕಡಿತಗೊಳಿಸುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –**

೧೦೭ (೧೯೮೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದ ವಿವಿಧ ನೇಮಕಾತಿ ಪ್ರಾಧಿಕಾರಗಳು ಮತ್ತು ನಿಗಮ/ ಮಂಡಳಿಗಳು ಹುದ್ದೆಗಳ ನೇಮಕಾತಿಯ ಅರ್ಜಿ ಸಲ್ಲಿಕೆಗೆ ನಿಗದಿಪಡಿಸಿರುವ ಅರ್ಜಿ ಶುಲ್ಕಗಳು ಎಷ್ಟು ;

(ಆ) ಪ್ರಸ್ತುತ ವಿವಿಧ ನೇಮಕಾತಿ ಪ್ರಾಧಿಕಾರಗಳು ಮತ್ತು ನಿಗಮ/ಮಂಡಳಿಗಳು ಒಂದು ಅರ್ಜಿಗೆ ೭೫೦ ರಿಂದ ೧೦೦೦ ರೂ.ಗಳ ವರೆಗಿನ ಗರಿಷ್ಠ ಮೊತ್ತದ ಶುಲ್ಕವನ್ನು ನಿಗದಿಪಡಿಸಿದ್ದು ಇದು ರಾಜ್ಯ ಬಡ ಅಭ್ಯರ್ಥಿಗಳಿಗೆ ಹೊರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅರ್ಜಿ ಶುಲ್ಕ ಕಡಿಮೆಗೊಳಿಸಲು ಕೈಗೊಂಡ ಕ್ರಮಗಳೇನು ;

(ಇ) ದೇಶದ ಘನವೆತ್ತ ಕೇಂದ್ರ ಲೋಕಸೇವಾ ಆಯೋಗವು ಯಾವುದೇ ಇಲಾಖೆಯ ಯಾವುದೇ ಹುದ್ದೆಗೆ ಕೇವಲ ೧೦೦/- ರೂ. ಅರ್ಜಿ ಶುಲ್ಕವನ್ನು ನಿಗದಿಪಡಿಸಿದ್ದು ಮತ್ತು ಆಂಧ್ರ, ತೆಲಂಗಾಣ, ಮಧ್ಯಪ್ರದೇಶ, ಪಂಜಾಬ್ ಹಾಗೂ ಇತರೆ ರಾಜ್ಯಗಳಲ್ಲಿ ಕನಿಷ್ಟ ಅರ್ಜಿ ಶುಲ್ಕವನ್ನು ನಿಗದಿಪಡಿಸಿದ್ದು, ರಾಜ್ಯದಲ್ಲಿ ಗರಿಷ್ಠ ಮೊತ್ತದ ಅರ್ಜಿ ಶುಲ್ಕವನ್ನು ನಿಗದಿಪಡಿಸಲು ಕಾರಣವೇನು ;

(ಈ) ಸರ್ಕಾರದ ೫ ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ ೫೨,೦೦೦ ಕೋಟಿ ರೂ.ಗಳ ಅನುದಾನವನ್ನು ಮೀಸಲಿಟ್ಟಿರುವ ಸರ್ಕಾರ ರಾಜ್ಯದ ಸ್ಪರ್ಧಾತ್ಮಕ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಅರ್ಜಿ ಶುಲ್ಕವನ್ನು ಕಡಿಮೆ ಮಾಡಬಹುದಲ್ಲವೇ ; ಈ ಬಗ್ಗೆ ಸರ್ಕಾರದ ನಿಲುವೇನು ?

## ಸರ್ಕಾರಿ ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ NPS ಪಿಂಚಣಿ ಯೋಜನೆ ಬದಲಾಗಿ OPS ಜಾರಿಗೆ ತರುವ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೧೦೮ (೧೧೯೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಸರ್ಕಾರಿ ನೌಕರರಿಗೆ ಪ್ರಸ್ತುತ ನೀಡುತ್ತಿರುವ NPS ಪಿಂಚಣಿ ಯೋಜನೆಯ ಬದಲಾಗಿ OPS ಪಿಂಚಣಿ ನೀಡುವ ಕುರಿತು ಅಧ್ಯಯನ

ಮಾಡಲು ಸಮಿತಿಯನ್ನು ರಚಿಸಲಾಗಿದೆಯೇ ; ಹಾಗಿದ್ದಲ್ಲಿ, ಯಾವ ದಿನಾಂಕದಂದು ರಚಿಸಲಾಗಿದೆ ; ಸಮಿತಿಯ ಸದಸ್ಯರ ಪಟ್ಟಿ ಒದಗಿಸುವುದು ;

(ಆ) ಈ ಸಮಿತಿಗೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ನಿಗದಿಪಡಿಸಲಾದ ದಿನಾಂಕ ಯಾವುದು ;

(ಇ) NPS ಯೋಜನೆ ಜಾರಿಗೆ ತರುವ ಕುರಿತು ಸಮಿತಿಯು ಅಧ್ಯಯನ ಮಾಡಿ ಪ್ರಾಥಮಿಕ ವರದಿ (Preliminary Report) ಸಲ್ಲಿಸಿದೆಯೇ ; (ಮಾಹಿತಿ ನೀಡುವುದು)

(ಈ) ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಇತ್ತಿಚೆಗೆ ಹೈಕೋರ್ಟ್, ಬೆಂಗಳೂರು ದ್ವಿಸದಸ್ಯ ಪೀಠ ದಿನಾಂಕ: ೨೪.೦೭.೨೦೨೬ರಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಪಿಂಚಣಿ ಸೌಲಭ್ಯವನ್ನು ನೀಡುವ ಕುರಿತು ಸರ್ಕಾರ ಯಾವ ನಿರ್ಧಾರ ಕೈಗೊಂಡಿದೆ ?

## ಬೆಂಗಳೂರಿನ ಪಣತ್ತೂರು ಗುಂಜೂರು ಸಿಡಿಪಿ ರಸ್ತೆ ಕಾಮಗಾರಿ ವಿಳಂಬದ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) –**

೧೯ (೧೧೦೩) ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪೂರ್ವ ಬೆಂಗಳೂರಿನ ಸಂಚಾರ ದಟ್ಟಣೆಗೆ ಪರಿಹಾರವಾಗಿ ನಿರ್ಮಿಸುತ್ತಿರುವ ಪಣತ್ತೂರು ಗುಂಜೂರು ನಡುವಿನ ಸಿಡಿಪಿ (ಸಮಗ್ರ ಅಭಿವೃದ್ಧಿ ಯೋಜನೆ) ರಸ್ತೆ ಕಾಮಗಾರಿ ವಿಳಂಬವಾಗಲು ಕಾರಣಗಳೇನು ;

(ಆ) ಹಲವು ವರ್ಷಗಳಿಂದ ಅರಣ್ಯ ಇಲಾಖೆಯು ಪಣತ್ತೂರು – ಗುಂಜೂರು ಸಿಡಿಪಿ (ಸಮಗ್ರ ಅಭಿವೃದ್ಧಿ ಯೋಜನೆ) ರಸ್ತೆ ಕಾಮಗಾರಿಗೆ ಅನುಮತಿ ನೀಡದೇ ಇರಲು ಕಾರಣವೇನು ;

(ಇ) ಪಣತ್ತೂರು – ಗುಂಜೂರು ಸಿಡಿಪಿ (ಸಮಗ್ರ ಅಭಿವೃದ್ಧಿ ಯೋಜನೆ) ರಸ್ತೆ ಕಾಮಗಾರಿ ವಿಳಂಬದಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ಯೋಜನೆಯ ರಸ್ತೆ ಕಾಮಗಾರಿಯನ್ನು ಯಾವ ಗಡುವಿನೊಳಗೆ ಪೂರ್ಣಗೊಳಿಸಲಾಗುವುದು ? (ಮಾಹಿತಿ ನೀಡುವುದು)

## BDA ಯಿಂದ ಅಭಿವೃದ್ಧಿಪಡಿಸಿರುವ ಹೊಸ ಬಡಾವಣೆಗಳ ಬಗ್ಗೆ ಮಾಹಿತಿ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) –**

೧೧೦ (೧೧೭೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಅಭಿವೃದ್ಧಿ ಪಡಿಸುತ್ತಿರುವ ಹೊಸ ಬಡಾವಣೆಗಳ ಸಂಖ್ಯೆ ಎಷ್ಟು ಮತ್ತು ಯಾವುವು ;

(ಆ) ಈ ಬಡಾವಣೆಗಳಲ್ಲಿ ವಿಂಗಡಣೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು ; ನಿವೇಶನ ಕೋರಿ ಸಾರ್ವಜನಿಕರು ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು ; ಮತ್ತು ಸಾರ್ವಜನಿಕರಿಗೆ ನಿವೇಶನಗಳನ್ನು ಯಾವಾಗ ವಿತರಣೆ ಮಾಡಲಾಗುವುದು ;

(ಇ) ಇತ್ತೀಚೆಗೆ ಹೊಸ ಬಡಾವಣೆಗಳನ್ನು ನಿರ್ಮಾಣ ಮಾಡಲು ಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ ಎಷ್ಟು ಮತ್ತು ಯಾವುವು ; ಇವುಗಳಲ್ಲಿ ೪.೧ ಮತ್ತು ೬.೧ ಅಧಿಸೂಚನೆ ಹೊರಡಿಸಿರುವ ಜಮೀನಿನ ವಿವರಗಳನ್ನು ನೀಡುವುದು ;

(ಈ) ಬೆಂಗಳೂರು ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಹೊಸ ಬಡಾವಣೆ ನಿರ್ಮಾಣ ಅಧಿಸೂಚನೆ ಹೊರಡಿಸಿರುವ ಜಮೀನಿನ ವಿವರಗಳನ್ನು ನೀಡುವುದು ; (ಸರ್ವೆ ನಂಬರ್‌ವಾರು, ಗ್ರಾಮವಾರು ಮಾಹಿತಿ ನೀಡುವುದು) ಈ ಜಮೀನಿನಲ್ಲಿ ಬಡಾವಣೆಗಳ ಅಭಿವೃದ್ಧಿಯನ್ನು ಯಾವಾಗ ನಿರ್ಮಾಣ ಮಾಡಲಾಗುವುದು ;

(ಉ) ಬಡಾವಣೆಗಳನ್ನು ನಿರ್ಮಾಣ ಮಾಡಲು ಸ್ವಾಧೀನಪಡಿಸಿಕೊಂಡಿರುವ ಜಮೀನಿನ ರೈತರಿಗೆ ಪ್ರತಿ ಎಕರೆಗೆ ನೀಡುವ ಪರಿಹಾರದ ಮೊತ್ತ ಎಷ್ಟು ; ಜಮೀನಿಗೆ ಪರಿಹಾರದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ ಕೈಗೊಂಡ ಕ್ರಮಗಳೇನು ?

## ರಾಜ್ಯದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಆಪ್ ನಿರ್ಬಂಧಗೊಳಿಸುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೧ (೧೧೬೬) ಗೃಹ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರತಿ ಆರು ಮಕ್ಕಳಲ್ಲಿ ಓರ್ವ ಮಗು ಆನ್‌ಲೈನ್ ಶೋಷಣೆಗೆ ಒಳಗಾಗುತ್ತಿರುವ ಆಘಾತಕಾರಿ ಅಂಶ ಪಾಲಕರ ಆತಂಕ ಮತ್ತು ಕಳವಳಕ್ಕೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ರಾಜ್ಯದಲ್ಲಿ ಕಳೆದ ೩ ವರ್ಷಗಳಲ್ಲಿ ಮಕ್ಕಳು ಆನ್‌ಲೈನ್ ಶೋಷಣೆಗೆ ಒಳಗಾಗಿರುವ ಎಷ್ಟು ಪ್ರಕರಣಗಳು ವರದಿಯಾಗಿವೆ ; (ಜಿಲ್ಲಾವಾರು ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಆಸ್ಟ್ರೇಲಿಯಾ, ಚೀನಾ ಇಂಡೋನೇಶಿಯಾ, ಫ್ರಾನ್ಸ್, ನ್ಯೂಜಿಲೆಂಡ್, ನೆದರ್‌ಲ್ಯಾಂಡ್, ಬೆಲ್ಜಿಯಂನಂತಹ ದೇಶಗಳು ಹಾಗೂ ಭಾರತದಲ್ಲಿ ಆಂಧ್ರಪ್ರದೇಶ, ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ೧೬ ವಯಸ್ಸಿಗಿಂತ ಕಡಿಮೆ ವಯಸ್ಸಿನ ಮಕ್ಕಳ ಶಾಲೆಗಳಲ್ಲಿ ಶಾಲಾ ಆವರಣದಲ್ಲಿ ಮೊಬೈಲ್ ಬಳಕೆ ನಿಷೇಧ ಹಾಗೂ ಸಾಮಾಜಿಕ ಜಾಲತಾಣಗಳ ಅಶ್ಲೀಲ APP ಗಳ ನಿರ್ಬಂಧ ವಿಧಿಸಲಾಗಿದ್ದು ; ಅದರಂತೆ ರಾಜ್ಯದಲ್ಲಿ ಮಕ್ಕಳು ಆನ್‌ಲೈನ್ ಶೋಷಣೆಗೆ ಒಳಗಾಗದಂತೆ ಪ್ರತಿಬಂಧಿಸಲು ಕ್ರಮ ಕೈಗೊಳ್ಳಲಾಗುವುದೇ ? (ವಿವರ ನೀಡುವುದು)

## ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಕೊಲೆ ಪ್ರಕರಣಗಳ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೨ (೧೧೧೭) ಗೃಹ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚಿನ ದಿನಗಳಲ್ಲಿ ವಿಜಯಪುರ ಜಿಲ್ಲೆ ಮತ್ತು ಸುತ್ತಮುತ್ತಲಿನ ಭಾಗಗಳಲ್ಲಿ ಸರಣಿ ಹತ್ಯೆ ಪ್ರಕರಣಗಳು, ಕೊಲೆ ಕೃತ್ಯಗಳು ಗಣನೀಯವಾಗಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಳೆದ ೨ ವರ್ಷಗಳಲ್ಲಿ ಈ ಭಾಗದಲ್ಲಿ ನಡೆದಿರುವ ಒಟ್ಟು ಕೊಲೆ ಪ್ರಕರಣಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಆ) ಹತ್ಯೆ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕಾನೂನು ಕ್ರಮಗಳೇನು ; ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ ಮತ್ತು ಎಷ್ಟು ಪ್ರಕರಣಗಳು ಇನ್ನು ತನಿಖಾ ಹಂತದಲ್ಲಿವೆ ; ಯಾವಾಗ ತನಿಖೆ ಪೂರ್ಣಗೊಳಿಸಿ ಅಪರಾಧಿಗಳನ್ನು ಶಿಕ್ಷೆಗೆ ಒಳಪಡಿಸಲಾಗುವುದು ;

(ಇ) ವಿಶೇಷವಾಗಿ ಚಡಚಣ ಪಟ್ಟಣದ ಒಂದೇ ಕುಟುಂಬದ ೫ ಜನ ಹಾಗೂ ಇನ್ನೋರ್ವರನ್ನು ಸೇರಿ ಒಟ್ಟು ೬ ಜನರನ್ನು ಚಡಚಣ ತಾಲ್ಲೂಕಿನ ಗೋವಿಂದಪೂರ ಗ್ರಾಮದಲ್ಲಿ ಹಾಡಹಗಲೇ ಬರ್ಬರವಾಗಿ ಹತ್ಯೆ ಮಾಡಲಾಗಿತ್ತು ; ಇದಕ್ಕೆ ಸಂಬಂಧಿಸಿದಂತೆ ಸರ್ಕಾರವು ಕೈಗೊಂಡ ಕಾನೂನು ಕ್ರಮಗಳೇನು ; ಅಪರಾಧಿಗಳಿಗೆ ಯಾವ ಕಾಲಮಿತಿಯೊಳಗೆ ಶಿಕ್ಷೆಗೆ ಒಳಪಡಿಸಲಾಗುವುದು ; (ಸಂಪೂರ್ಣ ಮಾಹಿತಿ ಮತ್ತು ವರದಿ ಸಲ್ಲಿಸುವುದು)

(ಈ) ಇಂತಹ ಜಘನ್ಯ ಕೃತ್ಯಗಳಲ್ಲಿ ಭಾಗಿಯಾದ ದುಷ್ಕರ್ಮಿಗಳಿಗೆ ತುರ್ತಾಗಿ ಕಠಿಣ ಶಿಕ್ಷೆ ವಿಧಿಸಲು ಹಾಗೂ ನ್ಯಾಯಾಲಯಗಳಲ್ಲಿ ಶೀಘ್ರ ವಿಚಾರಣೆ ನಡೆಸಲು (Fast-Track Trial) ಸರ್ಕಾರವು ವಿಶೇಷ ಅಭಿಯೋಜಕರನ್ನು

(Special Public Prosecutors) ನೇಮಿಸಿದೆಯೇ ; ಇಲ್ಲದಿದ್ದಲ್ಲಿ, ಈ ಕುರಿತು ಸರ್ಕಾರದ ನಿಲುವೇನು ;

(ಉ) ಹತ್ಯೆಗೀಡಾದ ಸಂತ್ರಸ್ತರ ಕುಟುಂಬಗಳಿಗೆ ತಕ್ಷಣದ ಆರ್ಥಿಕ ಪರಿಹಾರ ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸುವ ಮೂಲಕ ನ್ಯಾಯ ಒದಗಿಸಲು ಸರ್ಕಾರ ಕೈಗೊಂಡಿರುವ ಅಥವಾ ಕೈಗೊಳ್ಳಲಿರುವ ತುರ್ತು ಕ್ರಮಗಳೇನು ?

## ರಾಜ್ಯದಲ್ಲಿ ಮಾದಕ ವಸ್ತುಗಳ ನಿಯಂತ್ರಣದ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

೧೧೩ (೧೧೯) ಗೃಹ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಾದಕ ವಸ್ತು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆಯಡಿ (ಎನ್..ಡಿ.ಪಿ.ಎಸ್)ಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ವರ್ಷವಾರು ವಿವರ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೆ.ಜಿ. ಮಾದಕ ವಸ್ತು ವಶಪಡಿಸಿಕೊಳ್ಳಲಾಗಿದೆ ; ಅದರ ಮೌಲ್ಯವೆಷ್ಟು ;

(ಇ) ಮಾದಕ ವಸ್ತು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆಯಡಿ ದಾಖಲಾದ ಎಷ್ಟು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ ; ಎಷ್ಟು ಪ್ರಕರಣಗಳಲ್ಲಿ ಶಿಕ್ಷೆಯನ್ನು ನೀಡಲಾಗಿದೆ ; ಪ್ರಕರಣಗಳ ತ್ವರಿತ ವಿಲೇವಾರಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಮಾದಕ ವಸ್ತು ಸಾಗಾಣಿಕೆಯಲ್ಲಿ ಸಿಕ್ಕಿಬಿದ್ದ ವಿದೇಶಿಯರ ಸಂಖ್ಯೆ ಎಷ್ಟು ; ಅವರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು ;

(ಉ) ಮಾದಕ ವಸ್ತು ಮಾರಾಟ ಜಾಲ ಮತ್ತು ಡ್ರಗ್ಸ್ ಪೆಡ್ಲರ್‌ಗಳನ್ನು ಮಟ್ಟಹಾಕಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಊ) ಮಾದಕ ವಸ್ತು ವಿರೋಧಿ ಅಭಿಯಾನ ನಡೆಸಲು ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಮಾದಕ ವಸ್ತುವಿನ ಬಗ್ಗೆ ಜಾಗೃತಿ ಮೂಡಿಸಲು, ನಶಾಮುಕ್ತ ಭಾರತ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಬ್ಯಾಂಕ್ ಖಾತೆಯನ್ನು ತೆರೆದಿರುವ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೧೧೪ (೧೧೬೨) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬ್ಯಾಂಕ್ ಖಾತೆಯನ್ನು ಹೊಸದಾಗಿ ತೆರೆಯಲು ಆರ್ಥಿಕ ಇಲಾಖೆಯಿಂದ ನಿರ್ದೇಶನಗಳನ್ನು ನೀಡಲಾಗಿದೆಯೇ ; ನೀಡಿದ್ದಲ್ಲಿ, ಇಲಾಖಾವಾರು ಆದೇಶ/ನಿರ್ದೇಶನವನ್ನು ಪಾಲನೆ ಮಾಡುತ್ತಿದ್ದಾರೆಯೇ ; ಪಾಲನೆ ಮಾಡದಿದ್ದಲ್ಲಿ, ಸದರಿಯವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ/೦೫/ಟಿ.ಎಆರ್/೨೦೧೭, ದಿನಾಂಕ: ೩೦.೦೧.೨೦೧೭ರ ಪ್ರಕಾರ ರಾಜ್ಯ ಸರ್ಕಾರದ ಎಷ್ಟು ಇಲಾಖೆಗಳು, ಸ್ಥಳೀಯ ಸಂಸ್ಥೆಗಳು (ಆರ್.ಡಿ.ಪಿ.ಆರ್ ಮತ್ತು ನಗರ ಸ್ಥಳೀಯ ಸಂಸ್ಥೆಗಳು), ಪ್ರಾಧಿಕಾರಗಳು, ಮಂಡಳಿಗಳು, ನಿಗಮಗಳು, ಸೊಸೈಟಿಗಳು ದಿನಾಂಕ: ೩೦.೦೧.೨೦೧೭ ನಂತರ ತೆರೆಯಲಾಗಿರುವ ಬ್ಯಾಂಕ್ ಖಾತೆಗಳಿಗೆ ಇಲಾಖೆಯ ಸಮ್ಮತಿ/ಅನುಮೋದನೆಯನ್ನು ಪಡೆಯಲಾಗಿದೆಯೇ ; ಪಡೆದಿದ್ದಲ್ಲಿ, ಸಂಪೂರ್ಣವಾದ ಮಾಹಿತಿಯನ್ನು ನೀಡುವುದು ;

(ಇ) ಸರ್ಕಾರದ ಸದರಿ ಆದೇಶದ ಪ್ರಕಾರ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯ ಪ್ರಧಾನ ವ್ಯವಸ್ಥಾಪಕರಿಗೆ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಗಳ ಅಂಕಿ ಅಂಶಗಳನ್ನೊಳಗೊಂಡ ಮಾಹಿತಿಯನ್ನು ಒಂದು ತಿಂಗಳೊಳಗೆ ಒದಗಿಸುವಂತೆ ರಾಜ್ಯ ಸರ್ಕಾರದ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು (ಆರ್.ಡಿ.ಪಿ.ಆರ್ ಮತ್ತು ನಗರ ಸ್ಥಳೀಯ ಸಂಸ್ಥೆಗಳು) ಪ್ರಾಧಿಕಾರಗಳು, ಮಂಡಳಿಗಳು, ನಿಗಮಗಳು, ಸೊಸೈಟಿಗಳಿಗೆ

ಸೂಚಿಸಲಾಗಿತ್ತು ; ಆದೇಶದನ್ವಯ ಮಾಹಿತಿಯನ್ನು ಒದಗಿಸಲಾಗುತ್ತಿದೆಯೇ ; (ಅಂಕಿ ಅಂಶಗಳನ್ನೊಳಗೊಂಡ ಮಾಹಿತಿಯನ್ನು ಒದಗಿಸುವುದು)

(ಈ) ಸರ್ಕಾರದ ಆದೇಶದ ಪ್ರಕಾರ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯು ಆರು ತಿಂಗಳೊಳಗೆ ರಾಜ್ಯ ಸರ್ಕಾರದ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು (ಆರ್.ಡಿ.ಪಿ.ಆರ್ ಮತ್ತು ನಗರ ಸ್ಥಳೀಯ ಸಂಸ್ಥೆಗಳು) ಪ್ರಾಧಿಕಾರಗಳು, ಮಂಡಳಿಗಳು, ನಿಗಮಗಳು, ಸೊಸೈಟಿಗಳು ಹೊಂದಿರುವ ಖಾತೆಗಳ ಅಂಕಿ–ಅಂಶಗಳನ್ನು ಬ್ಯಾಂಕ್‌ಗಳಿಂದ ಪಡೆಯಲು/ನೀಡಲು ಸೂಚಿಸಲಾಗಿದ್ದು, ಆದೇಶದನ್ವಯ ಮಾಹಿತಿಯನ್ನು ಪಡೆಯಲಾಗಿದೆಯೇ ; ಅಂಕಿ–ಅಂಶಗಳನ್ನೊಳಗೊಂಡ ಮಾಹಿತಿಯನ್ನು ಒದಗಿಸುವುದು ; ಮೇಲ್ಕಂಡ ಆದೇಶದನ್ವಯ ಪಡೆಯಲಾದ ಅಂಕಿ–ಅಂಶಗಳನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯು ಮೌಲ್ಯಮಾಪನ ಮಾಡಿದೆಯೇ ; (ಮಾಡಿದ್ದಲ್ಲಿ, ಸಂಪೂರ್ಣವಾದ ಮಾಹಿತಿಯನ್ನು ನೀಡುವುದು)

## ನಮ್ಮ ಮೆಟ್ರೋ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ಸಂಖ್ಯೆ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೫ (೧೧೬೩) ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಮ್ಮ ಮೆಟ್ರೋ ರೈಲು ನಿಗಮ ಪ್ರಾರಂಭವಾಗಿ ಎಷ್ಟು ವರ್ಷಗಳಾಯಿತು ಇಲ್ಲಿಯವರೆಗೆ ಎಲ್ಲಾ ಮಾರ್ಗಗಳು ಸೇರಿದಂತೆ ನಿಗಮದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿ/ನೌಕರರ ಸಂಖ್ಯೆ ಎಷ್ಟು ; (ಕಾರ್ಯಾಚರಣೆ ಮತ್ತು ನಿರ್ವಹಣಾ ವಿಭಾಗ/ತಾಂತ್ರಿಕ ಸಿಬ್ಬಂದಿಗಳು ಸೇರಿದಂತೆ ಮಾಹಿತಿ ಒದಗಿಸುವುದು)

(ಆ) ಸದರಿ ಮೆಟ್ರೋ ನಿಗಮಕ್ಕೆ ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಎಂಬುದರ ಬಗ್ಗೆ ವಿವರವಾದ ಮಾಹಿತಿ ಒದಗಿಸುವುದು ;

(ಇ) ನಮ್ಮ ಮೆಟ್ರೋ ನಿಗಮದಲ್ಲಿ ಎಲ್ಲಾ ಮಾರ್ಗಗಳು ಸೇರಿದಂತೆ ಎಷ್ಟು ನಿಲ್ದಾಣಗಳನ್ನು ಹೊಂದಿದೆ ಹಾಗೂ ಒಂದೊಂದು ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಈ) ಈ ಒಟ್ಟು ನಿಲ್ದಾಣಗಳಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ? (ಕಾರ್ಯಾಚರಣೆ/ನಿರ್ವಹಣಾ ವಿಭಾಗ/ತಾಂತ್ರಿಕ ವಿಭಾಗ/ಇತರೆ ವಿಭಾಗಗಳು ಸೇರಿದಂತೆ ಮಾಹಿತಿ ಒದಗಿಸುವುದು)

## ಸಿಂಧನೂರ ನಗರದ ಸ್ಥಳೀಯ ಯೋಜನಾ ಪ್ರಾಧಿಕಾರದ 'Masterplan' ಪರಿಷ್ಕರಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೬ (೧೧೮೩) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ 'ಮಹಾಯೋಜನೆ' ('Masterplan')ಯನ್ನು ತಯಾರಿಸಿ ಸುಮಾರು ೨೦ ವರ್ಷಗಳು ಕಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸರ್ಕಾರದ ನಿಯಮಾವಳಿಗಳ ಪ್ರಕಾರ ಪ್ರತಿ ೧೦ ವರ್ಷಗಳಿಗೊಮ್ಮೆ 'ಮಹಾಯೋಜನೆ' ('Masterplan') ಅನ್ನು ಪರಿಷ್ಕರಿಸಲು ಅವಕಾಶವಿದ್ದು, ಇಲ್ಲಿಯವರೆಗೆ ಪರಿಷ್ಕರಿಸದಿರಲು ಕಾರಣವೇನು ;

(ಇ) ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಸಿಂಧನೂರು ನಗರದ ನೂತನ 'ಮಾಸ್ಟರ್ ಪ್ಲಾನ್' ತಯಾರಿಸುವ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ ;

(ಈ) ಯಾವ ಕಾಲಮಿತಿಯೊಳಗೆ ಸಿಂಧನೂರು ನಗರದ ನೂತನ 'ಮಹಾಯೋಜನೆ' ('Masterplan') ಅನ್ನು ತಯಾರಿಸಲಾಗುವುದು ?

## ಬಿ.ಬಿ.ಎಂ.ಪಿ.ಯ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಬಾಕಿ, ಅನುಪಾಲನ ವರದಿಗಳ ಹಣಕಾಸು ಅಕ್ರಮಗಳ ಕುರಿತು

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) –**

೧೧೭ (೧೧೭೬) ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಜಾರಿಗೆ ಬರುವ ಮುನ್ನ ಅಸ್ತಿತ್ವದಲ್ಲಿದ್ದ ಬಿ.ಬಿ.ಎಂ.ಪಿ. ೨೦೨೨–೨೩ನೇ ಸಾಲಿನ ಅಂತ್ಯದ ಅವಧಿಗೆ ಎಲ್ಲಾ ಸಾಲುಗಳಿಂದ ಸಂಚಿತಗೊಂಡಿರುವ ಒಟ್ಟು ೧೪,೦೦೦ ಕೋಟಿ ರೂ.ಗಳಿಗೂ ಮೀರಿದ ಮೊತ್ತದ ಲೆಕ್ಕ ಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಸಂಬಂಧಿಸಿದ ಅನುಪಾಲನಾ ವರದಿ ಸಲ್ಲಿಕೆಯಾಗದೇ ಉಳಿದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಲೆಕ್ಕಪರಿಶೋಧನಾ ವರದಿಗಳಿಗೆ ಸಂಬಂಧಿಸಿದಂತೆ ನಡೆಸಲಾದ ತನಿಖೆಯಲ್ಲಿ ಅನೇಕ ಆಕ್ಷೇಪಣೆಗಳು ಬಿ.ಬಿ.ಎಂ.ಪಿ ಅಧಿಕಾರಿಗಳಿಂದ ನಡೆದಿರುವ ಅಕ್ರಮಗಳಿಗೆ ಸಂಬಂಧಿಸಿದ್ದು, ಸದರಿ ಅಧಿಕಾರಿಗಳಿಂದ ಅಕ್ರಮಕ್ಕೆ ಸಂಬಂಧಿಸಿದ ಹಣ ವಸೂಲಾತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ಬಾಕಿಯಿರುವ ರೂ.೧೪,೦೦೦ ಕೋಟಿ ಮೊತ್ತದ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ಅನುಪಾಲನಾ ವರದಿ ಸಲ್ಲಿಸುವ ಸಂಬಂಧ ಸರ್ಕಾರದಿಂದ ಕಾಲಮಿತಿ ಯೋಜನೆಯ ಕಾರ್ಯಕ್ರಮ ಹೊಂದಿದ್ದರೆ ಸದರಿ ಯೋಜನೆಯ ವಿವರ ಒದಗಿಸುವುದು ;

(ಈ) ಮುಂದುವರೆದು, ೨೦೨೩–೨೪ನೇ ಸಾಲಿನ ಯೋಜನೆಗಳಿಗಾಗಿ ಬಿ.ಬಿ.ಎಂ.ಪಿ. ಯಿಂದ ವ್ಯಯಿಸಲಾದ ४,೧೦೨ ಕೋಟಿ ರೂಪಾಯಿಗಳ ಬಳಕೆಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ

ಇಲಾಖೆಯ ಪರಿಶೀಲನೆಗೆ ಸಲ್ಲಿಸಲಾಗಿರದ ಕಾರಣ ಸದರಿ ಬಳಕೆಯಲ್ಲಿ ಅನೇಕ ಆರ್ಥಿಕ ಅಶಿಸ್ತು/ಹಣ ದುರ್ಬಳಕೆ/ಅಕ್ರಮಗಳ ಅನುಮಾನ ಮೂಡಿದ್ದು ಪ್ರಮಾಣಪತ್ರ ಸಲ್ಲಿಸದಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆಯೇ ; ಕೈಗೊಂಡಿದ್ದಲ್ಲಿ, ವಿವರ ನೀಡುವುದು ?

## ನಿವೃತ್ತಿ ಹೊಂದಿದ ಸರ್ಕಾರಿ ನೌಕರರನ್ನು ಮರುನೇಮಕ ಮಾಡಿಕೊಳ್ಳುತ್ತಿರುವ ಕುರಿತು

**ಶ್ರೀ ಎ. ವಸಂತಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೮ (೧೯೧೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ನಿವೃತ್ತಿ ಹೊಂದಿದ ಸರ್ಕಾರಿ ನೌಕರರನ್ನು ವಿವಿಧ ಹುದ್ದೆಗಳಿಗೆ ಮರುನೇಮಕ/ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಕುರಿತು ಯಾವುದೇ ನಿರ್ಬಂಧ, ಮಾರ್ಗಸೂಚಿ ಅಥವಾ ಆದೇಶವನ್ನು ಹೊರಡಿಸಲಾಗಿದೆಯೇ ;

(ಆ) ಸರ್ಕಾರವು ಅಂತಹ ಮರುನೇಮಕಾತಿಯನ್ನು ನಿರ್ಬಂಧಿಸಿದ್ದರೂ, ರಾಜ್ಯದ ಕೆಲವು ಇಲಾಖೆಗಳು ನಿವೃತ್ತ ಸರ್ಕರಿ ನೌಕರರನ್ನು ವಿವಿಧ ಹುದ್ದೆಗಳಿಗೆ ಮರುನೇಮಕ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ೨೦೨೧–೨೨ ರಿಂದ ೨೦೨೪–೨೫ರ ವರೆಗೆ ರಾಜ್ಯದ ಎಲ್ಲಾ ಇಲಾಖೆಗಳು, ನಿಗಮ–ಮಂಡಳಿಗಳು, ಪ್ರಾಧಿಕಾರಗಳು ಹಾಗೂ ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ನಿವೃತ್ತ ಸರ್ಕಾರಿ ನೌಕರರನ್ನು ಮರುನೇಮಕ ಮಾಡಿಕೊಂಡಿರುವ ಪ್ರಕರಣಗಳೆಷ್ಟು ; (ಇಲಾಖಾವಾರು ಹಾಗೂ ವರ್ಷವಾರು ವಿವರ ನೀಡುವುದು)

(ಈ) ನಿವೃತ್ತ ನೌಕರರನ್ನು ಮರುನೇಮಕ ಮಾಡುವುದರಿಂದ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳನ್ನು ನಿಯಮಿತ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆಗೆ ತೊಂದರೆಯಾಗುತ್ತಿದೆಯೇ ; ಹಾಗೂ ಅರ್ಹ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿವೆ ; ಈ ಕುರಿತು ಸರ್ಕಾರ ಪರಿಶೀಲಿಸಿರುವುದೇ ?

# ಹೆಚ್ಚುತ್ತಿರುವ ವರದಕ್ಷಿಣೆ ಕಿರುಕುಳ ಹಾಗೂ ದೌರ್ಜನ್ಯ ಪ್ರಕರಣಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) –**

೧೯೯ (೧೧೬೮) ಗೃಹ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವರದಕ್ಷಿಣೆ ಕಿರುಕುಳ ಹಾಗೂ ವರದಕ್ಷಿಣೆಗಾಗಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ೨೦೨೨ ರಿಂದ ೨೦೨೬ರ ಜೂನ್‌ವರೆಗೆ ರಾಜ್ಯದಲ್ಲಿ ವರದಕ್ಷಿಣೆ ಕಿರುಕುಳಕ್ಕೆ ಸಂಬಂಧಿಸಿದಂತೆ ಒಟ್ಟು ಎಷ್ಟು ಪ್ರಕರಣಗಳು ದಾಖಲಾಗಿವೆ ; (ವರ್ಷವಾರು ವಿವರ ನೀಡುವುದು)

(ಇ) ಈ ಅವಧಿಯಲ್ಲಿ ವರದಕ್ಷಿಣೆ ಕಿರುಕುಳದಿಂದ ಎಷ್ಟು ಮಹಿಳೆಯರು ಮೃತಪಟ್ಟಿದ್ದಾರೆ ; ಜಿಲ್ಲವಾರು ವಿವರ ನೀಡುವುದು ;

(ಈ) ದಾಖಲಾಗಿರುವ ಪ್ರಕರಣಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲಾಗಿದೆ ; (ವಿವರ ಒದಗಿಸುವುದು)

(ಉ) ಎಷ್ಟು ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿದೆ ; ಎಷ್ಟು ಪ್ರಕರಣಗಳು ಖುಲಾಸೆಗೊಂಡಿವೆ ಹಾಗೂ ಎಷ್ಟು ಪರಕರಣಗಳು ನ್ಯಾಯಾಲಯಗಳಲ್ಲಿ ಬಾಕಿ ಇವೆ ; (ವಿವರ ಒದಗಿಸುವುದು)

(ಊ) ವರದಕ್ಷಿಣೆ ಕಿರುಕುಳ ಮತ್ತು ಸಾವು ಪ್ರಕರಣಗಳನ್ನು ನಿಯಂತ್ರಿಸಲು ಹಾಗೂ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕೈಗೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು)

## ಬಿಡದಿ ಉಪನಗರ ಯೋಜನೆ ಕುರಿತು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೦ (೧೧೧೯) ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿಡದಿ ಉಪನಗರ ನಿರ್ಮಾಣದ ಉದ್ದೇಶವೇನು ; ಇದರ ಸ್ವರೂಪವೇನು ; (ವಿಸ್ತೃತ ವಿವರ ನೀಡುವುದು)

(ಆ) ಬಿಡದಿ ಉಪನಗರ ನಿರ್ಮಿಸಲು ಎಷ್ಟು ಎಕರೆ ಜಮೀನು ಅಗತ್ಯವಿದೆ ; ಈ ಪೈಕಿ ಸರ್ಕಾರಿ ಹಾಗೂ ಖಾಸಗಿ ಜಮೀನಿನ ವಿವರ ನೀಡುವುದು ; ಯಾವ ಯಾವ ಗ್ರಾಮದ ಜಮೀನುಗಳನ್ನು ಸ್ವಾಧೀನಕ್ಕೆ ಪಡೆಯಲು ನಿರ್ಧರಿಸಲಾಗಿದೆ ;

(ಇ) ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಆರಂಭವಾಗಿದೆಯೇ ; ಸರ್ಕಾರ ನಿಗದಿಪಡಿಸಿರುವ ಪರಿಹಾರ ಧನ ಎಷ್ಟು ; (ವಿವರ ನೀಡುವುದು) ಜಮೀನು ನೀಡಲು ಸ್ಥಳೀಯರು ವಿರೋಧ ವ್ಯಕ್ತಪಡಿಸಲು ಕಾರಣಗಳೇನು ;

(ಈ) ಜಮೀನಿನ ಸರ್ವೆಗೆ ತೆರಳಿದ್ದ ಸರ್ಕಾರಿ ಅಧಿಕಾರಿ/ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿದ ಆರೋಪದ ಮೇಲೆ ಎಷ್ಟು ಸ್ಥಳೀಯರ ಮೇಲೆ ಮೊಕದ್ದಮೆ ಹೂಡಲಾಗಿದೆ ; ಎಷ್ಟು ಜನರನ್ನು ಬಂಧಿಸಲಾಗಿದೆ ;

(ಉ) ಜಮೀನು ಮಾಲೀಕರ ಜೊತೆ ಸರ್ಕಾರ ಸಂಧಾನ ನಡೆಸಿದೆಯೇ ; ಅವರ ಬೇಡಿಕೆಗಳೇನು ; ಅವರ ಬೇಡಿಕೆಗಳ ಬಗ್ಗೆ ಸರ್ಕಾರದ ನಿಲುವೇನು ; ಉಪನಗರ ನಿರ್ಮಾಣ ಕಾರ್ಯ ಎಂದಿನಿಂದ ಆರಂಭವಾಗಲಿದೆ ; ಯಾವಾಗ ಪೂರ್ಣಗೊಳ್ಳಲಿದೆ ?

**ಜ್ಯೋತಿ**
ಕಾರ್ಯದರ್ಶಿ (ಪ್ರ.)
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಕಾ.ಸೂ.308/ಪಿ5

**List of Questions for Oral Answers**

**Total No. of Questions - 15**

# LIST - 8

# KARNATAKA LEGISLATIVE COUNCIL

## ONE HUNDRED AND FIFTY NINTH SESSION

## Thursday, the 27th August, 2026

---

**GROUP - IV**

1. Chief Minister
2. Minister for Greater Bengaluru Development
3. Minister for Urban Development
4. Minister for Home and Information Technology and Bio-Technology and e-Governance
5. Minister for Excise
6. Minister for Planning and Statistics

---

### UGD WORK UNDER MANGALURU CITY CORPORATION

**Sri. P.V. Mohan (Elected by Legislative Assembly) -**

106 (1136) Will the Minister for Urban Development be pleased to state :-

(a) the total amount that has been spent under various schemes for the underground drainage (UGD) system in the limit of Mangaluru City Corporation during the last three years ;

(b) the details of the amount that has been sanctioned and spent and the details of basic facilities that have been provided by ADB, AMRUT, State Government, KUIDC and MCC schemewise be furnished ;

(c) the reason for the situation that has been arised for upgrading 185 km UGD network at present ; whether it has been caused due to technical lapses, lack of maintenance or substandard works ; the information along with the reason be furnished ;

(d) the present condition of UGD network that has been constructed under ADB scheme ; out of which, the length of kilometer of the network that is being functioning properly ;

(e) whether the UGD leakage detection and hydraulic testing has been carriedout across the city ; if so, whether its report would be published ;

(f) whether any comprehensive water quality survey has been conducted by the Government with regard to contamination of wells, bore wells, lakes or other water bodies due to the leakage of underground drainage (UGD) ;

(g) whether the steps would be taken by the Government to test the water quality of wells which is located especially in the premises of religious centers such as temples, mosques and churches ?

## VARIOUS RECRUITMENT AUTHORITIES OF THE STATE GOVERNMENT AND REDUCTION OF APPLICATION FEE

**Sri. Shashil G. Namoshi (Teachers' Constituency) -**

107 (1197) Will the Chief Minister be pleased to state :-

(a) the details of the application fees that have been fixed for the submission of application for recruitment of posts by various recruitment authorities and corporation / boards of the State Government ;

(b) the maximum amount fee of Rs.750 to Rs.1000 per application has been fixed by various recruitment authorities and corporation/boards at present, whether it has come to the notice of the Government that the

same is being burdened for the poor candidate of the State ; if so, the measures taken to reduce the application fee ;

(c) the Hon'ble Union Public Service Commission of this nation has been fixed Rs.100/- only for the application fee for any post of the any department and also minimum application fee has been fixed in Andhrapradesh, Madhyapradesh, Punjab and other States, the reason to fixing maximum amount of application fee in the State ;

(d) the State Government has earmarked 52,000 crore rupees for 5 guarantee schemes of the Government, whether the application fee will be reduced in the interest of students for their competitive examinations ; the stand of the Government in this regard ?

**IMPLEMENTATION OF OLD PENSION SCHEME (OPS)**

**Sri. S.V. Sankanur (Graduates' Constituency) -**

108 (1195) Will the Chief Minister be pleased to state :-

(a) whether the committee has been constituted to conduct the study with regard to implementation of Old Pension Scheme (OPS) instead of New Pension Scheme (NPS) which is being provided to the State Government employees at present ; if so, the date on which it has been constituted ; the list of committee members be furnished ;

(b) the date that has been prescribed to conduct the study and submit the report to this committee ;

(c) whether the committee has studied and submitted preliminary report with regard to the implementation of the New Pension Scheme ; (information be furnished)

(d) the particular of decision that has been taken by the Government with regard to providing pension facility to employees of aided educational institution in view of judgment that has been ordered by two judges bench of High Court, Bengaluru on 24.07.2026 ?

## DELAY IN THE PANATHUR-GUNJUR CDP ROAD WORK OF BENGALURU

**Sri. Ramojigowda (Graduates' Constituency) -**

109 (1103) Will the Minister for Greater Bengaluru Development be pleased to state :-

(a) the reasons for the delay in the CDP (comprehensive development plan) road work between Panathur and Gunjur which is being constructed as a relief to traffic congestion in East Bengaluru ;

(b) the reason for the non approval by the Forest Department for Panathur-Gunjur CDP (comprehensive development plan) road work from several years ;

(c) whether it has come to the notice of the Government that the hardship is being faced by the public due to the delay in Panathur-Gunjur CDP (comprehensieve development plan) road work ; if so, the timelimit within which the road works of said project would be completed ? (information be furnished)

## INFORMATION OF NEW LAYOUTS DEVELOPED BY BDA

**Sri. D.T. Srinivas (D.T.S) (Teachers' Constituency) -**

110 (1174) Will the Chief Minister be pleased to state :-

(a) the number of new layouts which are being developed by the Bengaluru Development Authority and the particulars thereof ;

(b) the number of sites that have been allocated in these layouts ; the number of applications that have been submitted by the public for seeking site ; and the date on which the sites would be distributed for public ;

(c) the extent of lands that have been acquired for the formation of new layouts recently and the particulars thereof ; out of which, the details of the land for which 4.1 and 6.1 notifications have been issued be furnished ;

(d) the details of the land for which the notification has been issued for the formation of new layout in Bidarahalli Hobli and surrounding villages of Bengaluru East taluk be furnished ; (survey numberwise, villagewise information be furnished) ; the date on which the development of layouts in this land would be carriedout ;

(e) the amount of compensation that would be provided per acre of the land to the farmers which have been acquired for the formation of layouts ; whether the proposal is before the Government to increase the compensation amount for the land ; if so, the steps taken in this regard ?

## BAN ON OBSCENE APPS IN SOCIAL MEDIA IN THE STATE

**Sri. P.H. Pujar (Local Authorities Constituency) -**

111 (1166) Will the Minister for Home and Information Technology and Bio-Technology and e-Governance be pleased to state :-

(a) whether it has come to the notice of the Government about the shocking fact that one in every six children in the State is being subjected to online exploitation which is causing deep concern and anxiety among parents ; if so, the number of cases of children who have subjected to online exploitation have been reported in the State during the last three years ; (districtwise and talukwise information be furnished)

(b) the use of mobile phones in schools and school premises for children below the age of 16 years has been banned and restrictions have been imposed on obscene apps of social media in the countries like Australia, China, Indonesia, France, Newzealand, Netherland, Belgium and States like Andhra Pradesh and Himachal Pradesh in India, accordingly, whether the action would be taken to restrict the children as to not subjected to online exploitation in the State ? (details be furnished)

## MURDER CASES OCCURING IN RECENT DAYS

**Sri. N. Ravikumar (Elected by Legislative Assembly) -**

112 (1117) Will the Minister for Home and Information Technology and Bio-Technology and e-Governance be pleased to state :-

(a) whether it has come to the notice of the Government that there is a significant increase in incidents of serial murders and murder acts in Vijayapura district and its surrounding areas in recent days ; if so, the total of murder cases that have been occurred in this area during the last 2 year ; (talukwise complete details be furnished)

(b) the legal actions taken by the Government against the accused who are involved in murder cases ; the murder cases in which the accused have been detained and the number of cases which are under investigation stage ; the date on which the criminals would be punished by completing an investigation ;

(c) especially, 5 people of same family and another person in total 6 people of Chadchan town were brutally killed in broad daylight in Govindapur village of Chadchan taluk, the legal action that have been taken by the Government in this regard ; the timelimit within which the criminals would be punished ; (complete information and its report be furnished)

(d) whether the special public prosecutors have been appointed by the Government to impose strict punishment immediately for the criminals who are involved in such heinous crimes and to conduct fast-track trial in the courts ; if not, the stand of the Government in this regard ;

(e) the emergency steps that have been taken or would be taken by the Government to provide the justice through providing immediate financial compensation and social security for the families of victims who have been murdered therein ?

**CONTROL OF NARCOTIC DRUGS IN THE STATE**

**Sri. Chidanand M.Gowda (Graduates' Constituency) -**

113 (1129) Will the Minister for Home and Information Technology and Bio-Technology and e-Governance be pleased to state :-

(a) the total number of cases that have been lodged under the narcotic drugs and psychotropic substances Act (NDPS) during the last three years in the State ; (districtwise and yearwise details be furnished)

(b) the number of kilograms of narcotic drugs that have been seized during the last three years ; the value thereof ;

(c) the number of cases that have been lodged under the narcotic drugs and psychotropic substances Act are under trail in the court ; the number of cases in which the punishment has been imposed ; the steps taken by the Government for speed disposal of the cases ;

(d) the number of foreign nationals who have been caught under narcotic drugs trafficking ; the action taken by the Government against them ;

(e) the steps taken by the Government to crush drug sales networks and tackle drug peddlers ;

(f) the steps taken by the Government to conduct an anti-drug campaigns for the creation of awareness among the students of school and colleges with regard to drugs and to build a drug free India ?

**REGARDING OPENING OF BANK ACCOUNT**

**Sri S.L. Bhojegowda (Teachers' Constituency) -**

114 (1162) Will the Chief Minister be pleased to state :-

(a) whether the directions have been issued by the Finance Department to open new bank account ; if so, whether the order/directions have been complied by the departments ; if not, the action that has been taken on the said persons ; (complete information be furnished)

(b) whether departments, local bodies (R.D.P.R and urban local bodies), authorities, boards, corporations and societies of the State Government have been obtained the assent/approval of the department for bank accounts that have been opened after 30.01.2017 as per the Government order; FD/05/T.A.R/ 2017, dated; 30.01.2017 ; if so, the complete information be furnished ;

(c) it was intimated that the departments of the State Government, local bodies (R.D.P.R and urban local bodies), authorities, boards, corporations and societies should provide the information of statistics of existing bank accounts within one month to the principal director of the Karnataka State Audit and Accounts Department as per the said order of the Government, whether the information is being provided as per the order ; (the information alongwith statistics be furnished)

(d) it was intimated that the departments of the State Government, local bodies (R.D.P.R and urban local

bodies), authorities, boards, corporations and societies should get the statistics of accounts from the banks within six months by the Karnataka State audit and accounts department as per the order of the Government, whether the information has been obtained as per the order ; the information alongwith statistics be furnished ; whether the evaluation of the statistics received has been done by the Karnataka State Audit and Accounts Department as per the above order ? (if so, complete information be furnished)

## NUMBER OF OFFICERS/EMPLOYEES WORKING IN NAMMA METRO RAIL CORPORATION

**Sri. T.N. Javarayi Gowda (Elected by Legislative Assembly) -**

115 (1163) Will the Minister for Greater Bengaluru Development be pleased to state :-

(a) the number of year that have been completed since the commencement of the Namma Metro rail corporation ; the number of officers/employees who are working in the corporation including all routes till date ; (information including department of operation and maintenance and technical staff be furnished)

(b) the total number of sanctioned posts to the said metro corporation ; the detailed information about the number of posts which are lying vacant be furnished ;

(c) the number of stations which are there in Namma metro rail corporation including all routes and the number of officers and employees who are working in each station ; (details be furnished)

(d) the number of employees who are working on outsourced basis in these total stations ? (information including operation/ maintenance department/technical department/other departments be furnished)

## REVISION OF MASTER PLAN FOR LOCAL PLANNING AUTHORITY IN SINDHANUR CITY

**Sri. Basanagouda Badarli (Elected by Legislative Assembly) -**

116 (1183) Will the Minister for Urban Development be pleased to state :-

(a) whether it has come to the notice of the Government that approximately 20 years have been elapsed after preparing the 'Master Plan' for the local planning area of Sindhanur city ;

(b) there is a provision to revise the 'Master Plan' once in every 10 years as per rules of the Government, the reasons for the same has not been revised till date ;

(c) the present stage of proposal which has to prepare a new 'Master Plan' for Sindhanur city by the Sindhanur Urban Development Authority ;

(d) the timelimit within which new master plan of Sindhanur city would be prepared ?

## PENDENCY OF AN AUDIT OBJECTIONS, COMPLIANCE REPORT AND FINANCIAL IRREGULARITIES OF B.B.M.P

**Sri. H.P. Sudham Das (Nominated) -**

117 (1176) Will the Minister for Greater Bengaluru Development be pleased to state :-

(a) whether it has come to the notice of the Government that the compliance report has not been submitted regarding objections of an audit report exceeding total 14,000 crore rupees of amount that has been consolidated from all years till the end of year 2022-23 to the B.B.M.P which has been existed prior implementation of the Greater Bengaluru Development Authority ;

(b) after conducted investigation regarding to the said audit reports, several objections related to the irregularities that have been occurred by the officers of B.B.M.P, the step taken by the Government for recovery of the amount from the said officers in this regard ;

(c) if the Government has the programme of timelimit plan with regard to submission of compliance report regarding objections of outstanding Rs.14,000 crores of amount, the details of the said plan be furnished ;

(d) further that with regard to the utilization of Rs.4,102 crore that has been spent by the B.B.M.P for the schemes in the year 2023-24, concerned certificates have not been submitted to the State Audit and Accounts Department for verification in this regard suspicion of financial indiscipline/ misappropriation of amount/ irregularities have been arised in the said utilization of amount, whether the legal action has been taken against the officers who have not submitted certificate ; if so, the details thereof be furnished ?

## RE-APPOINTMENT OF RETIRED GOVERNMENT EMPLOYEES

**Sri. A. Vasantha Kumar (Elected by Legislative Assembly) -**

118 (1190) Will the Chief Minister be pleased to state :-

(a) whether any restrictions, guidelines or orders have been issued by the State Government with regard to re-appointment or contract basis appointment of retired Government employees to various posts ;

(b) eventhough the State Government has restricted such re-appointment, whether it has come to the notice of the Government that several departments of the State have re-appointing the retired Government employees to various posts ;

(c) the number of re-appointment cases of retired Government employees in all departments, corporations, boards, authorities and Government undertakings of the State from 2021-22 to 2025-26 ; (departmentwise and yearwise details be furnished)

(d) whether the hardship is being caused to the recruitment process of filling of vacant posts through the regular recruitment in the department due to re-appointment of retired Government employees ; and the employment opportunities are decreasing for eligible unemployed youths, whether the Government has examined in this regard ?

## INCREASING DOWRY HARASSMENT AND ATROCITY CASES

**Sri. Hemalatha Nayaka (Elected by Legislative Assembly) -**

119 (1168) Will the Minister for Home and Information Technology and Bio-Technology and e-Governance be pleased to state :-

(a) whether it has come to the notice of the Government that the dowry harassment and atrocities cases against women for dowry are increasing in the State ; if so, the steps taken by the Government ;

(b) the total number of cases that have been lodged in the State with regard to dowry harassment from 2022 to June 2026 ; (yearwise details be furnished)

(c) the number of women who have died due to dowry harassment during this period ; districtwise details be furnished ;

(d) out of the lodged cases, the number cases in which the investigation has been completed and the charge sheet has been submitted to the court ; (details be furnished)

(e) the number of cases in which the accused have been convicted ; the number of cases which have been acquitted and the number of cases which are pending in the courts ; (details be furnished)

(f) the steps taken by the Government to control the cases of dowry harassment and death and to take stringent action against the culprits ? (details be furnished)

## REGARDING BIDADI SATELLITE TOWN PROJECT

**Sri. C.T. Ravi (Elected by Legislative Assembly) -**

120 (1119) Will the Minister for Greater Bengaluru Development be pleased to state :-

(a) the intension of formation of Bidadi satellite town ; the Nature thereof; (detailed information be furnished)

(b) the extent of the acres of land that is required to form Bidadi satellite town ; out of which, the details of the Government and private land be furnished ; the particulars of the lands of villages it has decided to acquire ;

(c) whether the process of land acquisition has been commenced ; the compensation amount that has been fixed by the Government; (details be furnished) the reasons for opposition by the local people to provide the land ;

(d) the number of local people against whom the complaint has been lodged with regard to allegation of attacking against the Government officer/staff who went for the survey of the land ; the number of people who have been detained ;

(e) whether the Government has held negotiations with the owners of the land ; the particulars of the demands of land owners ; the stand of the Government with regard to their demands ; the date on which formation work of satellite town would be commenced ; the date on which it would be completed ?

**JYOTI**
Secretary (I/c)
Karnataka Legislative Council

Government Press, Vikasa Soudha Unit, - P2